

ಸಾಕ್ಷಿ. ನಮ್ಮ ಕೊನೆಯ ಭೇಟಿ ಅದೇ ಪೊಲೀಸ್ ಸ್ಟೇಷನ್ ಸೆಲ್‌ನಲ್ಲಿ ಆಗಿದ್ದಿದ್ದು. ನಲವತ್ತಾರು ವರ್ಷಗಳಾದವು ನೋಡು. ಎಲ್ಲಾ ಮೊನ್ನೆ ಮೊನ್ನೆ ನಡೆದಂತೆ ಅನ್ನಿಸ್ತಾ ಇದೆ. ಅದಿರಲಿ, ಮೊದಲು ಸ್ನಾನ ಮಾಡಿ ಫ್ರೆಶ್ ಆಗಿ ಬಾ. ತಿಂಡಿಗೆ ಟೈಮಾಗಿದೆ' ಎಂದಿದ್ದ. ನಾರಾಯಣ ಹೆಗಡೆ ನನ್ನನ್ನು ಮಹಡಿಯ ಮೇಲಿನ ವಿಶಾಲವಾದ ರೂಮಲ್ಲಿ ಬಿಟ್ಟು 'ಇದು ಗೆಸ್ಟ್ ರೂಂ. ಕೆಳಗೆ ಹಿತ್ತಲಿನ ಬಾತ್ ರೂಮಲ್ಲಿ ಸೌದೆಯಲ್ಲಿ ಕಾಯಿಸಿದ ಹಂಡೆ ಬಿಸಿನೀರು ಭರ್ತಿ ರೆಡಿಯಿದೆ. ಸಾವಕಾಶ ಸ್ನಾನ ಮಾಡಿ. ನಮ್ಮ ಕರಾವಳಿ ಮತ್ತು ಮಲೆನಾಡಿನಲ್ಲಿ ಸೌದೆಯಲ್ಲಿ ಕಾಯಿಸಿದ ನೀರಿನಲ್ಲಿ ಸ್ನಾನ ಮಾಡುವುದೇ ಒಂದು ಸೊಬಗು' ಎಂದು ಕೆಳಗಿಳಿದಿದ್ದ. ನಾರಾಯಣ ಹೆಗಡೆ ಹೇಳಿದಂತೆ ಸೌದೆಯಲ್ಲಿ ಕಾಯಿಸಿದ ನೀರಿನ ಸ್ನಾನ ತುಂಬಾನೇ ಆಹ್ಲಾದಕರವಾಗಿತ್ತು. ಸ್ನಾನ ಮಾಡಿ ರೆಡಿಯಾಗಿ ಬಂದಾಗ ಜಿ.ವಿ. ಹೆಗಡೆ ಡೈನಿಂಗ್ ಟೇಬಲ್ ಬಳಿ ಕುಳಿತಿದ್ದ. ನಾನೂ ಸೀದಾ ಹೋಗಿ ಅವನ ಪಕ್ಕ ಕುಳಿತಿದ್ದೆ. ಪಾತ್ರೆಯೊಂದರಲ್ಲಿ ಸುಡು ಸುಡು ಇಡ್ಲಿ ಮತ್ತು ದೋಸೆಯನ್ನು ತಂದು ನಾರಾಯಣ ಹೆಗಡೆ ಬಾಳೆಯ ಎಲೆಗಳಿಗೆ ಬಡಿಸಿ ನಂಜಲು ಮಾವಿನ ಹಣ್ಣಿನ ಸೀಕರಣೆ, ತೆಂಗಿನಕಾಯಿ ಚಟ್ನಿ ಮತ್ತು ಮಾವಿನಕಾಯಿ ಮಿಡಿಯನ್ನು ಬಡಿಸಿದ್ದ. 'ಆರು ವರ್ಷಗಳ ಹಿಂದೆ ನನ್ನ ಹೆಂಡತಿ ಹೋಗಿಬಿಟ್ಟು. ಅವಳು ಸತ್ತ ವರ್ಷಕ್ಕೆ